ದಿನಾಂಕಃ **07-04-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಸಿ.ಜೆ.ಜಿ.ರವರಿಂದ ಃ

**1.** ನನ್ನ ಸ್ವಂತ ಸ್ಥಳ ಹಿರೇಮರಳಿ. ಆರೋಪಿ ನನ್ನ ಬಾಮೈದ ಗಿರೀಶ್ ಉಃ ಸೋಮಾ ರವರಿಂದ ಪರಿಚಿತರು. ಆರೋಪಿ 6-7 ವರ್ಷಗಳಿಂದ ಪರಿಚಿತರು. ಆರೋಪಿಯು ಪಾಂಡವಪುರ ರೈಲ್ವೇ ಸ್ಟೇಷನ್ ನಲ್ಲಿ ಚೆಕ್ ಪೋಸ್ಟ್ ನಲ್ಲಿ ಗೇಟ್ ಮ್ಯಾನ್ ಆಗಿದ್ದಾರೆ. ಆರೋಪಿಗೆ ಆ ಕೆಲಸ ಹೇಗೆ ಸಿಕ್ಕಿತು ಎಂದು ನನಗೆ ಗೊತ್ತಿಲ್ಲ. ಆರೋಪಿಯ ತಂದೆ ಮೃತಪಟ್ಟ ನಂತರ (Compassionate ground) ಅವರ ತಂದೆಯ ಕೆಲಸ ಆರೋಪಿಗೆ ಸಿಕ್ಕಿದೆ ಎಂದರೆ ನನಗೆ ಗೊತ್ತಿಲ್ಲ. ರೈಲ್ವೇ ಸ್ಟೇಷನ್ ನಲ್ಲಿ ಆರೋಪಿಯ ಕೆಲಸ ಏನೆಂದು ನನಗೆ ಸರಿಯಾಗಿ ಗೊತ್ತಿಲ್ಲ. ಆರೋಪಿ ಶ್ರೀರಂಗಪಟ್ಟಣ ವಾಸಿ. ಆತ ಶ್ರೀರಂಗಪಟ್ಟಣದ ರೈಲ್ವೆ ಇಲಾಖೆಯವರು ಕೊಟ್ಟಿರುವ ರೂಮ್ ನಲ್ಲಿ ವಾಸವಾಗಿದ್ದಾನೆ. ಆರೋಪಿಯ ಕುಟುಂಬದವರ ಬಗ್ಗೆ ನನಗೆ ಗೊತ್ತಿಲ್ಲ. ಅರೋಪಿಯು ಅವರ ತಂದೆಯ ಜೊತೆ ವಾಸವಾಗಿದ್ದಾರೆ. ನಾನು ಆರೋಪಿಗೆ ಹಣ ಕೊಟ್ಟ ಬಗ್ಗೆ ರೈಲ್ವೇ ಇಲಾಖೆಗಾಗಲೀ ಅಥವಾ ಆತನ ತಂದೆ ತಾಯಿಗಾಗಲೇ ತಿಳಿಸಿಲ್ಲ. ಆರೋಪಿಯನ್ನು ಹಣ ಕೊಡು ಎಂದು ರೈಲ್ವೆ ಸ್ಟೇಷನ್ ಬಳಿ ದಿಃ23.12.2022 ರಂದು ಹೋಗಿ ಕೇಳಿದ್ದೇನೆ. ಅರೋಪಿಯು ನೀಡಿದನು ಎನ್ನುವ ಚೆಕ್ ನಂಬರ್ ನನಗೆ ಗೊತ್ತಿಲ್ಲ. ಆರೋಪಿಯು ಶ್ರೀರಂಗಪಟ್ಟಣದ ರೈಲ್ವೆ ಕ್ವಾಟ್ರಸ್ ನಲ್ಲಿ ವಾಸವಾಗಿದ್ದಾರೆ. ಅದನ್ನು ಬಿಟ್ಟು ಬೇರೆ ವಾಸಸ್ಥಳ ನನಗೆ ಗೊತ್ತಿಲ್ಲ. ಆರೋಪಿಯು ಪಾಂಡವಪುರ ತಾಲ್ಲೂಕು, ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಬಾಮೈದ ಗಿರೀಶ್ ಉಃ ಸೋಮಾ ಕ್ಯಾತನಹಳ್ಳಿಯವರು ಎಂದರೆ ಸರಿ. ನನ್ನ ಬಾಮೈದ ಮತ್ತು ಆರೋಪಿ ಸ್ನೇಹಿತರು ಎಂದರೆ ಸರಿ.

**2.** ನನ್ನ ಮತ್ತು ನನ್ನ ಬಾಮೈದನ ನಡುವೆ ಯಾವುದೇ ಹಣದ ವ್ಯವಹಾರ ಇಲ್ಲ. ಆರೋಪಿ ಮತ್ತು ನನ್ನ ಬಾಮೈನ ನಡುವೆ ನಡೆದಿರುವ ಹಣದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಬಾಮೈದನ ಪರಿಚಿತಿನಾದ ಕಾರಣ ನಮ್ಮ ಮನೆಗೆ ಬಂದು ಹಣ ಪಡೆದುಕೊಂಡು ಹೋದ ಎಂದರೆ ಸರಿ. ಆಗ ಆರೋಪಿ ಒಬ್ಬನೇ ಬಂದಿದ್ದ. ನಾನು ಅನಕ್ಷರಸ್ಥ. ನಾನು ಹಣ

ಕೊಟ್ಟಾಗ ಆರೋಪಿ ನನಗೆ ಚೆಕ್ ಕೊಟ್ಟ. ಆರೋಪಿ ನನಗೆ ಚೆಕ್ ಕೊಟ್ಟಾಗ ಅದನ್ನು ನನ್ನ ಹೆಂಡತಿ ಸುನಿತಾಗೆ ಕೊಟ್ಟು ತಿಳಿದುಕೊಂಡೆ. ಸದರಿ ಚೆಕ್ಕು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೆಕ್ಕಾಗಿತ್ತು. ಚೆಕ್ ನಂಬರ್ ನಾನು ಓದಿಸಿ ತಿಳಿದುಕೊಂಡಿಲ್ಲ. ನಾನು ವಕೀಲರಿಗೆ ಯಾವುದೇ ಮಾಹಿತಿ ನೀಡಿಲ್ಲ, ಚೆಕ್ ಮಾತ್ರ ಕೊಟ್ಟೆ. ಆರೋಪಿಯ ಬಗ್ಗೆ ನಾನು ಯಾವುದೇ ಮಾಹಿತಿ ನೀಡಲ್ಲಿಲ್ಲ. ವಕೀಲರು ನನ್ನನ್ನು ಕೇಳಲಿಲ್ಲ, ನಾನು ಸಹ ಹೇಳಲಿಲ್ಲ. ಆರೋಪಿ ಮತ್ತು ನನ್ನ ಬಾಮೈದ ಸ್ನೇಹಿತರಾದ ಕಾರಣ ಅವರ ನಡುವೆ ನಡೆದ ಹಣದ ವ್ಯವಹಾರಕ್ಕಾಗಿ ಆರೋಪಿ ನನ್ನ ಬಾಮೈದನಿಗೆ ಖಾಲಿ ಚೆಕ್ ಕೊಟ್ಟಿದ್ದು, ನನ್ನ ಬಾಮೈದ ನನ್ನ ಮೂಲಕ ಈ ದೂರನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಆತ ತನ್ನ ಹೆಂಡತಿಗೆ ಸೇರಿದ ಚೆಕ್ಕನ್ನು ನೀಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಬಾಮೈದ ಸ್ನೇಹಿತರಾದ ಕಾರಣ ಆರೋಪಿ ತನ್ನ ಹೆಂಡತಿಯ ಚೆಕ್ಕನ್ನು ತಂದು ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ.

**3**. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ವಕೀಲರ ಮೂಲಕ ನೋಟೀಸು ಕೊಟ್ಟ ನಂತರ ಆರೋಪಿಯನ್ನು ಖುದ್ದಾಗಿ ಬೇಟಿಯಾಗಿ ಹಣ ಕೇಳಿದ್ದೇನೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

ಸಾಕ್ಷಿದಾರರ ಸಹಿ. ಪಾಂಡವಪುರ.